(ಇಂದು ದಿನಾಂಕಃ 23-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಮ.ಎಸ.ಎಸ ವಕೀಲರಿಂದ ಃ</u>**

1. ನಾನು ಶಿವಪ್ಪಾ ಹೈಬತಿಯವರನ್ನು ನೋಡಿಲ್ಲ. ಶಿವಪ್ಪಾ ಹೈಬತಿಯವರ ಖರೀದಿ ಪತ್ರವನ್ನು ನಾನು ನೋಡಿಲ್ಲ. ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಯಾರು ಹೇಳಿದರು ಎಂದರೆ ಸಾಕ್ಷಿ ನನ್ನ ತಂದೆ ಹೇಳಿದರು ಎಂದು ಹೇಳುತ್ತಾರೆ. ಜಮೀನನ್ನು ಖರೀದಿ ಮಾಡಿರುವ ಬಗ್ಗೆ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ನನ್ನ ತಂದೆ ಹೇಳಿದ ಮೇರೆಗೆ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ಖರೀದಿ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ ಎಂದರೆ ಸರಿ. ಸರ್ವೆ ನಂಬರ 44 ಕ್ಕೆ ಸಂಬಂಧ ಪಟ್ಟಂತೆ ಈ ದಾವೆ ನಡೆದಿದೆ. ಸರ್ವೆ ನಂಬರ 44 ರಲ್ಲಿ 07 ಎಕರೆ ಚಿಲ್ಲರೆ ಗುಂಟೆ ಇರುತ್ತದೆ. ಸರ್ವೆ ನಂಬರ 44 ರ ಸಂಬಂಧ ಪಟ್ಟಂತೆ ಪಹಣಿಯನ್ನು ನಾನು ನೋಡಿಲ್ಲ. ಪಹಣಿಯನ್ನು ನಾನು ನೋಡಿಲ್ಲ, ಆದ್ದರಿಂದ ಯಾರ ಹೆಸರಿನಲ್ಲಿ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲಾ ಎಂದರೆ ಸಾಕ್ಷಿ ನಾನು ನೋಡಿದಿದ್ದರು ಯಾರ ಹೆಸರಿನಲ್ಲಿ ಇದೆ ಎಂದು ಹೇಳುತ್ತೇನೆ ಎಂದು ನುಡಿಯುತ್ತಾರೆ. ನಾನು ಪಹಣಿಯನ್ನು ನೋಡದಿದ್ದರು ಯಾವ ಆಧಾರದ ಮೇಲೆ ಹೇಳುತ್ತೇನೆ ಎಂದರೆ ಸಾಕ್ಷಿ ಪಹಣಿ ನೋಡಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 44 ರಲ್ಲಿ ಎಷ್ಟು ಹಿಸ್ಸೆಗಳು ಇವೆ ಎಂದರೆ ಸಾಕ್ಷಿ ಎರಡು ಹಿಸ್ಸೆ ಇವೆ ಎಂದು ಹೇಳುತ್ತಾರೆ. ಎರಡು ಹಿಸ್ಸೆಯ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸರ್ವೆ ನಂಬರ 44 ರಲ್ಲಿ ಎರಡು ಹಿಸ್ಸೆ ಇವೆ ಎಂದು ನಾನು ಹೇಳುತ್ತಿದ್ದು ಪ್ರತಿ ಹಿಸ್ಸೆಯಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಇದೆ ಎಂದರೆ ಸಾಕ್ಷಿ 03 ಎಕರೆ ಚಿಲ್ಲರೆ ಗುಂಟೆ ಇದೆ ಎಂದು ಹೇಳಿ ಮುಂದುವರೆದು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಜಮೀನು ನಾನು ನೋಡಿರುತ್ತೇನೆ. ಈ ಜಮೀನಿನ ಸ್ವಾಧೀನದಲ್ಲಿ ಯಾರು ಇದ್ದಾರೆ ಎಂದರೆ ಸಾಕ್ಷಿ ಭೀಮು ತಂದೆ ಗೇಮು ಇದ್ದಾರೆ ಎಂದು ಹೇಳುತ್ತಾರೆ. ಭೀಮು ತಂದೆ ಗೇಮುರವರು ಸ್ವಾಧೀನದಲ್ಲಿ ಇರುವ ಜಮೀನಿನ ಪೂರ್ವಕ್ಕೆ ಹಣಮಂತ ತಂದೆ ಬಂಡೆಪ್ಪ, ಪಶ್ಚಿಮಕ್ಕೆ ಘಟ್ಟ, ಉತ್ತರಕ್ಕೆ ಘಟ್ಟ ದಕ್ಷಿಣಕ್ಕೆ ವಾರಿ ಇದೆ ಎಂದರೆ ಸರಿ. ರಾಮಣ್ಣ ತಂದೆ ಯಲಪ್ಪರವರು ಸ್ವಾಧೀದಲ್ಲಿರುವ ಜಮೀನಿನ ಪೂರ್ವಕ್ಕೆ ರುಪಲಾರವರ ಜಮೀನು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ರಾಮಣ್ಣರವರಿಗೆ ಸಾಯಿಬಣ್ಣ ಮತ್ತು ನಾಗಪ್ಪ ಎಂಬ ಇಬ್ಬರು ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ರಾಮಣ್ಣ ತಂದೆ ಯಲಪ್ಪರವರು ಸ್ವಾಧೀದಲ್ಲಿರುವ ಜಮೀನಿನ ಪಶ್ಚಿಮಕ್ಕೆ ಘಟ್ಟಾ ಇದೆ ಎಂದರೆ ಸರಿ. ಪಶ್ಚಿಮಕ್ಕೆ ಘಟ್ಟಾ ಆದ ನಂತರ ದಾವಾ ಆಸ್ತಿ ಬರುತ್ತದೆ ಎಂದರೆ ಸರಿ. ರಾಮಣ್ಣ ತಂದೆ ಯಲಪ್ಪರವರು ಸ್ವಾಧೀದಲ್ಲಿರುವ ಜಮೀನಿನ ಉತ್ತರಕ್ಕೆ ಘಟ್ಟಾ ಇದೆ ಎಂದರೆ ಸರಿ. ರಾಮಣ್ಣ ತಂದೆ ಯಲಪ್ಪರವರು

ಸ್ವಾಧೀದಲ್ಲಿರುವ ಜಮೀನಿನ ದಕ್ಷಿಣಕ್ಕೆ ಶಾಮರಾವ ಮತ್ತು ಭೀಮರಾವರ ಹೊಲ ಇದೆ ಎಂದರೆ ಸರಿ. ಮೊದಲು ರಾಮಣ್ಣ ತಂದೆ ಯಲಪ್ಪ ಸ್ವಾಧೀನದಲ್ಲಿ ಇದ್ದರು ಅವರ ನಂತರ ಅವರ ಮಕ್ಕಳು ಮತ್ತು ವಾರಸುದಾರರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸಿದ್ದಪ್ಪಾ ಹೈಬತಿಯರವರನ್ನು ನಾನು ನೋಡಿಲ್ಲ. ಸಿದ್ದಪ್ಪಾ ಹೈಬತಿಯ ಮತ್ತು ಶಿವಪ್ಪಾ ಹೈಬತಿಯವರ ನಡುವೆ ಪಾಲು ಆಗಿರುವ ಬಗ್ಗೆ ನಾನು ನೋಡಿಲ್ಲ ಎಂದರೆ ಸರಿ. ಯಾವತ್ತು ಭೀಮು ಅಥವಾ ವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲಾ ಎಂದರೆ ಸಾಕ್ಷಿ ಅವರು ಇದ್ದರೆ ಎಂದು ಹೇಳುತ್ತಾರೆ. ಸರ್ವೆ ನಂಬರ 44 ರಲ್ಲಿ ಸ್ವಾಧೀದಲ್ಲಿ ಮೊದಲು ರಾಮಣ್ಣ ತಂದೆ ಯಲಪ್ಪರವರು ಇದ್ದು ಈಗ ಅವರ ವಾರಸುದಾರರು ಇದ್ದಾರೆ ಎಂದರೆ ಸರಿಯಲ್ಲ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ, ಬೇರೆ ಭಾಷೆ ಬರುವುದಿಲ್ಲ. ಸರ್ವೆ ನಂಬರ 44 ರಲ್ಲಿ ಗೇಮುರವರ ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ ಎಂದು ನಾನು ಯಾವುದೇ ದಾಖಲೆಯನ್ನು ನೋಡಿಲ್ಲ ಆದರೆ ಅವರು ಸ್ವಾಧೀನದಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. ನನಗೆ ಗೊತ್ತಿದ್ದರಂತೆ ಸರ್ವೆ ನಂಬರ 44 ರ ಜಮೀನಿನ ಜಮೀನಿನ ಅಳತೆ ಯಾವತ್ತು ಆಗಿರುವುದಿಲ್ಲ. ಸರ್ವೆ ನಂಬರ 44 ರಲ್ಲಿ ವಾದಿಗಳು ಯಾವತ್ತು ಸ್ವಾಧೀದಲ್ಲಿ ಮತ್ತು ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.